# ಜನಪದ ರಂಗಭೂಮಿ ಮತ್ತು ಅದರ ಸಾಮಾಜಿಕ ಪ್ರಭಾವ

**ಸುಪ್ರಿಯಾ ಮಲಶೆಟ್ಟಿ***

DOI: https://doi.org/10.5281/zenodo.22107536

**ABSTRACT**

ಜನಪದ ರಂಗಭೂಮಿ ಜನಸಾಮಾನ್ಯರ ಜೀವನ, ಸಂಸ್ಕೃತಿ, ನಂಬಿಕೆ, ಆಚರಣೆ, ಸಂಪ್ರದಾಯ, ಅನುಭವ ಮತ್ತು ಸಮಸ್ಯೆಗಳನ್ನು ಆಧರಿಸಿದ ಸಾಂಪ್ರದಾಯಿಕ ಪ್ರದರ್ಶನ ಕಲೆಯಾಗಿದೆ. ಇದು ಗ್ರಾಮೀಣ ಜನಜೀವನದೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಮೌಖಿಕ ಪರಂಪರೆಯ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಮುಂದುವರಿದಿದೆ. ಕರ್ನಾಟಕದಲ್ಲಿ ಯಕ್ಷಗಾನ, ಬಯಲಾಟ, ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ಸೂತ್ರದ ಗೊಂಬೆಯಾಟ ಮತ್ತು ತೊಗಲುಗೊಂಬೆಯಾಟ ಪ್ರಮುಖ ಜನಪದ ರಂಗಕಲೆಗಳಾಗಿವೆ. ಸ್ಥಳೀಯ ಭಾಷೆ, ಸಂಗೀತ, ನೃತ್ಯ, ಹಾಸ್ಯ, ವ್ಯಂಗ್ಯ, ಸರಳ ರಂಗಸಜ್ಜಿಕೆ ಮತ್ತು ಸಾಮೂಹಿಕ ಭಾಗವಹಿಸುವಿಕೆ ಇದರ ಮುಖ್ಯ ಲಕ್ಷಣಗಳಾಗಿವೆ.

ಕರ್ನಾಟಕದ ಜನಪದ ರಂಗಭೂಮಿಗೆ ದೀರ್ಘ ಇತಿಹಾಸವಿದ್ದು, ಇದು ಕೇವಲ ಮನರಂಜನೆಯ ಸಾಧನವಲ್ಲದೆ ಜನರ ಜೀವನದ ಪ್ರತಿಬಿಂಬವಾಗಿದೆ. ರಾಮಾಯಣ, ಮಹಾಭಾರತ, ಪುರಾಣಗಳು, ಶರಣರ ಕಥೆಗಳು ಹಾಗೂ ಸಾಮಾಜಿಕ ವಿಷಯಗಳನ್ನು ಜನರಿಗೆ ತಲುಪಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ. ಸತ್ಯ, ನ್ಯಾಯ, ಧರ್ಮ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಬೋಧಿಸುವ ಮೂಲಕ ಜನಪದ ರಂಗಭೂಮಿ ಸಾಮಾಜಿಕ ಶಿಕ್ಷಣದ ಮಾಧ್ಯಮವಾಗಿದೆ.

ಇದು ಅನಕ್ಷರತೆ, ಮೂಢನಂಬಿಕೆ, ಜಾತಿಭೇದ, ಬಾಲ್ಯವಿವಾಹ, ವರದಕ್ಷಿಣೆ, ಶೋಷಣೆ ಮುಂತಾದ ಸಾಮಾಜಿಕ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುತ್ತದೆ. ಮಹಿಳಾ ಸಬಲೀಕರಣ, ಪ್ರಜಾಸತ್ತಾತ್ಮಕ ಮೌಲ್ಯಗಳು, ಸಾಮಾಜಿಕ ಏಕತೆ ಮತ್ತು ಸಂಸ್ಕೃತಿಯ ಸಂರಕ್ಷಣೆಗೆ ಸಹಕಾರ ನೀಡುತ್ತದೆ. ಸ್ಥಳೀಯ ಕಲಾವಿದರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸುತ್ತದೆ. ಆಧುನಿಕ ಕಾಲದಲ್ಲಿಯೂ ಪರಿಸರ ಸಂರಕ್ಷಣೆ, ಆರೋಗ್ಯ, ಸ್ವಚ್ಛತೆ, ಮಾದಕ ವ್ಯಸನ, ಸೈಬರ್ ಅಪರಾಧ ಮತ್ತು ಮತದಾನದಂತಹ ವಿಷಯಗಳ ಕುರಿತು ಜಾಗೃತಿ ಮೂಡಿಸಲು ಇದು ಪರಿಣಾಮಕಾರಿ ಮಾಧ್ಯಮವಾಗಿದೆ. ಆದ್ದರಿಂದ ಜನಪದ ರಂಗಭೂಮಿ ನಮ್ಮ ಸಂಸ್ಕೃತಿಯ ಸಂರಕ್ಷಕ, ಜನರ ಶಿಕ್ಷಣದ ಸಾಧನ ಮತ್ತು ಸಾಮಾಜಿಕ ಪರಿವರ್ತನೆಯ ಶಕ್ತಿಶಾಲಿ ಮಾಧ್ಯಮವಾಗಿದೆ.

* **ಡಾ. ಸುಪ್ರಿಯಾ ಮಲಶೆಟ್ಟಿ,** ಸಹಾಯಕ ಪ್ರಾಧ್ಯಾಪಕರು, ಎಸ್.ಜೆ.ಎಂ.ವಿ.ಎಸ್. ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಜೆ.ಸಿ. ನಗರ, ಹುಬ್ಬಳ್ಳಿ.

**KEYWORDS:** ಜನಪದ ರಂಗಭೂಮಿ, ಸಂಸ್ಕೃತಿ, ಸಾಮಾಜಿಕ ಜಾಗೃತಿ, ಶಿಕ್ಷಣ, ಸಾಮಾಜಿಕ ಪರಿವರ್ತನೆ.

ಜನಪದ ರಂಗಭೂಮಿ ಎಂದರೆ ಸಾಮಾನ್ಯ ಜನರ ಜೀವನ, ಸಂಸ್ಕೃತಿ, ನಂಬಿಕೆ, ಆಚರಣೆ, ಸಂಪ್ರದಾಯ, ಸಮಸ್ಯೆಗಳು ಮತ್ತು ಅನುಭವಗಳನ್ನು ಆಧರಿಸಿಕೊಂಡು ಜನಸಾಮಾನ್ಯರಿಗಾಗಿ ಪ್ರದರ್ಶಿಸುವ ಸಾಂಪ್ರದಾಯಿಕ ನಾಟಕೀಯ ಕಲಾ ಪ್ರಕಾರ. ಇದು ಗ್ರಾಮೀಣ ಪ್ರದೇಶಗಳ ಜನಜೀವನದೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಪೀಳಿಗೆಯಿಂದ ಪೀಳಿಗೆಗೆ ಮೌಖಿಕವಾಗಿ ಮತ್ತು ಪ್ರಾಯೋಗಿಕವಾಗಿ ಮುಂದುವರಿದು ಬಂದಿದೆ. ಕರ್ನಾಟಕದಲ್ಲಿ ಯಕ್ಷಗಾನ, ಬಯಲಾಟ, ದೊಡ್ಡಾಟ, ಸಣ್ಣಾಟ, ಗೊಂಬೆಯಾಟ, ತಾಳಮದ್ದಳೆ ಮುಂತಾದವು ಜನಪದ ರಂಗಭೂಮಿಯ ಪ್ರಮುಖ ರೂಪಗಳಾಗಿವೆ.

**ಜನಪದ ರಂಗಭೂಮಿಯ ಪ್ರಮುಖ ಲಕ್ಷಣಗಳು:**

- ಜನಜೀವನದ ಪ್ರತಿಬಿಂಬ – ರೈತರು, ಕಾರ್ಮಿಕರು, ಗ್ರಾಮೀಣ ಜನರು ಮತ್ತು ಅವರ ಜೀವನಾನುಭವಗಳು ಕಥಾವಸ್ತುವಾಗುತ್ತವೆ.
- ಮೌಖಿಕ ಪರಂಪರೆ – ಅನೇಕ ಕಲೆಗಳು ಲಿಖಿತ ಪಠ್ಯಕ್ಕಿಂತ ಮೌಖಿಕ ಪರಂಪರೆಯ ಮೂಲಕ ಮುಂದುವರಿದಿವೆ.
- ಸ್ಥಳೀಯ ಭಾಷೆಯ ಬಳಕೆ – ಜನರಿಗೆ ಸುಲಭವಾಗಿ ಅರ್ಥವಾಗುವ ಸ್ಥಳೀಯ ಭಾಷೆ ಮತ್ತು ಉಪಭಾಷೆಗಳನ್ನು ಬಳಸಲಾಗುತ್ತದೆ.
- ಸಂಗೀತ ಮತ್ತು ನೃತ್ಯ – ಸಂಭಾಷಣೆಯ ಜೊತೆಗೆ ಹಾಡು, ವಾದ್ಯ ಮತ್ತು ನೃತ್ಯ ಪ್ರಮುಖ ಪಾತ್ರ ವಹಿಸುತ್ತವೆ.
- ಸರಳ ಪ್ರದರ್ಶನ – ದೊಡ್ಡ ವೇದಿಕೆ ಅಥವಾ ದುಬಾರಿ ಸಿದ್ಧತೆಗಳ ಅಗತ್ಯವಿಲ್ಲದೆ ಬಯಲು ಪ್ರದೇಶಗಳಲ್ಲಿಯೂ ಪ್ರದರ್ಶಿಸಬಹುದು.
- ಹಾಸ್ಯ ಮತ್ತು ವ್ಯಂಗ್ಯ – ಸಾಮಾಜಿಕ ಸಮಸ್ಯೆಗಳನ್ನು ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಹಾಸ್ಯ ಮತ್ತು ವ್ಯಂಗ್ಯದ ಮೂಲಕ ಪ್ರದರ್ಶಿಸಲಾಗುತ್ತದೆ.
- ಸಾಮೂಹಿಕ ಭಾಗವಹಿಸುವಿಕೆ – ಕಲಾವಿದರು ಮತ್ತು ಪ್ರೇಕ್ಷಕರ ನಡುವೆ ನೇರವಾದ ಸಂಬಂಧ ಇರುತ್ತದೆ.
- ಮನರಂಜನೆಯೊಂದಿಗೆ ಶಿಕ್ಷಣ – ಮನರಂಜನೆಯ ಜೊತೆಗೆ ನೈತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದೇಶಗಳನ್ನು ನೀಡುತ್ತದೆ.

ಕರ್ನಾಟಕವು ಜಾನಪದ ರಂಗಭೂಮಿಯಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಈ ಪ್ರಾದೇಶಿಕ ಭಾಗಗಳ ಅನ್ವಯ ಯಕ್ಷಗಾನ ಬಯಲಾಟಗಳ ವರ್ಗೀಕರಣವನ್ನು ಮಾಡಿಕೊಳ್ಳಬಹುದು. ಬಯಲು ಸೀಮೆಯಾದ್ಯಂತ ಎಂದರೆ ಮೈಸೂರು ಜಿಲ್ಲೆಯಿಂದ ಬೀದರ್ ಜಿಲ್ಲೆಯವರೆಗೆ ಕಂಡುಬರುವ ಯಕ್ಷಗಾನ ಬಯಲಾಟಗಳನ್ನು ಮೂಡಲಪಾಯ ಎಂದು, ಕರಾವಳಿಯ ಭಾಗದ ಯಕ್ಷಗಾನ ಬಯಲಾಟಗಳನ್ನು ಪಡುವಲಪಾಯ ಎಂದು ಗುರುತಿಸಲಾಗುತ್ತದೆ. ಇವುಗಳ ಜೊತೆಗೆ ಘಟ್ಟದ ಕೋರೆ, ಲೇಖಾ ಮುಂತಾದ

ಸಂಪ್ರದಾಯಗಳೂ ಕಾಣಬರುತ್ತವೆ. ಸೂತ್ರದ ಗೊಂಬೆಯಾಟ, ತೊಗಲುಗೊಂಬೆಯಾಟ ಇವು ಸಹ ಯಕ್ಷಗಾನ ಸಂಪ್ರದಾಯಕ್ಕೆ ಸೇರಿದ ಕಲೆಗಳು. ಇವುಗಳ ಜೊತೆಗೆ ಉತ್ತರ ಕರ್ನಾಟಕದಲ್ಲಿ ಕಂಡುಬರುವ ದೊಡ್ಡಾಟ – ಸಣ್ಣಾಟಗಳು ಜಾನಪದ ರಂಗಭೂಮಿಗೆ ಸೇರುತ್ತವೆ. ಯಕ್ಷಗಾನ ಬಯಲಾಟಗಳು ಮೂಲ ದ್ರಾವಿಡ ನೃತ್ಯ ನಾಟಕವೊಂದರಿಂದ ಕವಲೊಡೆದು ದಕ್ಷಿಣ ಭಾರತದ ನಾಲ್ಕು ಪ್ರಮುಖ ದ್ರಾವಿಡ ದೇಶಗಳಲ್ಲೂ ಪ್ರಾದೇಶಿಕ ವೈವಿಧ್ಯವನ್ನು ರೂಢಿಸಿಕೊಂಡು ಬೆಳೆದಿವೆ. ಅವು ಕರ್ನಾಟಕದ ಬಯಲಾಟ, ಆಂಧ್ರದ ವೀದಿನಾಟಕ, ತಮಿಳುನಾಡಿನ ತೆರುಕ್ಕೂತ್ತು, ಕೇರಳದ ಕಥಕ್ಕಳಿ. ಇದರಲ್ಲಿ ಕಥಕ್ಕಳಿ ಮಾತ್ರ ಪರಿಷ್ಕಾರಗೊಂಡು ತುಂಬಾ ಪ್ರೌಢಿಮೆಯನ್ನು ಸಾಧಿಸಿಕೊಂಡು ಪಂಡಿತ ಕಲೆಯಾಗಿ ರೂಪಗೊಂಡಿದೆ. ಕರಾವಳಿಯ ಯಕ್ಷಗಾನವೂ ಇದೇ ಹಿನ್ನೆಲೆಯಲ್ಲಿ ಈಗಿನ ತನ್ನ ಜಾನಪದೀಯತೆಯನ್ನು ಕಳೆದುಕೊಂಡು ಮಾತುಗಾರಿಕೆ, ಅಭಿನಯ, ಸಂಗೀತದಲ್ಲಿ ಪ್ರೌಢತೆಯನ್ನು ಸಾಧಿಸಿಕೊಳ್ಳುತ್ತಿದೆ.

ಜನಪದ ರಂಗಭೂಮಿ ಎಂದರೇನು? ರಂಗಭೂಮಿ ಎಂದರೆ ರಂಗಮಂಟಪ ಅಥವಾ ವೇದಿಕೆ ಮಾತ್ರವಲ್ಲ, ವಾಸ್ತವವಾಗಿ ಅದು ಪ್ರದರ್ಶನ ರಂಗ ಅಥವಾ ರಂಗಸ್ಥಳ. ಪರದೆ, ಆಸನಗಳು, ವೇಷಭೂಷಣ, ಪ್ರೇಕ್ಷಕ ಸ್ಥಳ ಮತ್ತು ಶಬ್ದ ವ್ಯವಸ್ಥೆಯನ್ನು ಒಳಗೊಂಡ, ರಂಗಭವನದ ಮುಖ್ಯಾಂಗ, ಸಾಮೂಹಿಕ ಕಲೆಯಾದ ನಾಟಕವನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸುವ ಅಭಿನಯ ಕ್ಷೇತ್ರವದು. ರಂಗಭೂಮಿ ಎಂಬುವುದಕ್ಕೆ ವಿಶಾಲ ವ್ಯಾಪ್ತಿ ಇದೆ. ನಾಟಕವು ನಟ–ನಟಿಯರು, ಪ್ರೇಕ್ಷಕರನ್ನು ಒಳಗೊಂಡ ಮಹಾಸಂಸ್ಥೆ ಅದು.

ಜಾನಪದ ರಂಗಭೂಮಿ ಇದು ಜೀವನರಂಗಕ್ಕೆ ಹಿಡಿದ ಕನ್ನಡಿ, ಇದರಲ್ಲಿ ಅಪೇಕ್ಷಿತ–ಅನಪೇಕ್ಷಿತ ದೃಶ್ಯಗಳೆಲ್ಲವೂ ಸುಳಿದು ಹೋಗುತ್ತವೆ. ಮಾನವನ ಅನುಭವಗಳ ಅಭಿವ್ಯಕ್ತಿಗೆ ರಂಗಭೂಮಿಗಿಂತ ಉತ್ತಮ ಮಾಧ್ಯಮ ಬೇರೊಂದಿಲ್ಲ. ಆದುದರಿಂದಲೇ 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಪ್ರಾಚೀನರ ಅನುಭವದ ಅಭಿವ್ಯಕ್ತಿ ಇಂದಿಗೂ ಪ್ರಸ್ತುತ. ಈ ದೃಷ್ಟಿಯಿಂದಲೇ ವಿದ್ವಾಂಸರು ಹೇಳಿದಂತೆ ರಂಗಭೂಮಿ ಎಂದರೆ ಜನತೆಯ ವಿಶ್ವವಿದ್ಯಾಲಯ, ಜನತೆಯ ದೇಗುಲ.

ಕರ್ನಾಟಕ ಜನಪದ ರಂಗಭೂಮಿಗೆ ಸಾವಿರ ವರ್ಷಗಳ ಇತಿಹಾಸವಿದೆ. ಜಾನಪದ ರಂಗಭೂಮಿ, ಶಿಷ್ಟ ರಂಗಭೂಮಿಗಿಂತ ಪ್ರಾಚೀನ. ಇದು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಾದ ಜನಪದರಿಂದ ಹುಟ್ಟಿರುವಂತಹದ್ದು. ಜನಪದರ ಮನೋರಂಜನೆ ಮತ್ತು ಮನೋವಿಕಾಸಕ್ಕಾಗಿ ಗ್ರಾಮೀಣರ ಜೀವನ ವಿಧಾನ, ರೀತಿ–ನೀತಿ, ಚಾತುರ್ಯ, ಚಮತ್ಕಾರ, ಆದರ್ಶ ಮೌಲ್ಯಗಳೆಲ್ಲ ಇದರಲ್ಲಿ ಯಥಾವತ್ತಾಗಿ ಚಿತ್ರಿತವಾಗಿರುತ್ತವೆ. 9ನೇ ಶತಮಾನದ ಕವಿರಾಜಮಾರ್ಗದಲ್ಲಿ ಉಲ್ಲೇಖಿತಗೊಂಡ ನಾಳ್ಪಗರಣ, ಬೆದಂಡೆಗಬ್ಬ, ಚತ್ತಾಣ, ಬಾಜನಗಬ್ಬಗಳು ದೇಸಿ ಆಟಗಳೆಂದು ವಿದ್ವಾಂಸರು ಖಚಿತಗೊಳಿಸಿದ್ದಾರೆ. ಮದನ ತಿಲಕ ಗ್ರಂಥದಲ್ಲಿ ಪಗರಣದಂಥ ಆಟವನ್ನು ಜವ್ವನೆಯರು, ಕನ್ಯಾಮಣಿಗಳು ನೋಡಬಾರದೆಂದು ಹೇಳಿದೆ. ಅಂದರೆ ಈ ಗ್ರಂಥದ ರಚನೆಯ ವೇಳೆಯಾಗಲೇ ಜನತಾ ರಂಗಭೂಮಿ ಜನಪ್ರಿಯವಾಗಿರುವ ಸಾಧ್ಯತೆ ಇದೆ. ಹಾಗೆಯೇ ಕುಮಾರವ್ಯಾಸ ತನ್ನ ಭಾರತದಲ್ಲಿ ಹಳ್ಳಿಯ ನಾಟಕ ರಂಗದ ಆಟವನ್ನು 'ನಾಡಾಡಿಗಳ ನಾಟಕ'ವೆಂದು ಕರೆದಿದ್ದಾರೆ. ಅಲ್ಲದೇ ದೊಡ್ಡಾಟದ ಪರದೆಯನ್ನು ಕುಮಾರವ್ಯಾಸ ಅಂದೇ ಸೂಚಿಸಿದ್ದಾರೆ.

ಕರ್ನಾಟಕ ಜನಪದ ರಂಗಭೂಮಿ ತನ್ನ ಸಮೃದ್ಧಿಯಿಂದ, ವೈವಿಧ್ಯದಿಂದ ಉನ್ನತಿಯನ್ನು ಸಾಧಿಸಿಕೊಂಡಿದೆ. ತನ್ನೆಲ್ಲಾ ಆಕರ್ಷಣೆಗಳಿಂದ ಜನತೆಯಲ್ಲಿ ಸಹಸ್ರಾರು

ವರ್ಷಗಳಿಂದ ಕಲಾ ಶ್ರದ್ಧೆಯನ್ನು ಉಳಿಸಿಕೊಂಡು ಬಂದಿದೆ. ಜನಪದ ರಂಗಭೂಮಿಯ ಬಯಲಾಟಗಳು ಬರೀ ಮನೋರಂಜನಾ ಕಲೆಗಳಲ್ಲ; ಇವು ಸಮಾಜಕ್ಕೆ ನೀತಿ ಬೋಧಕವೂ ಆಗಿವೆ. ಸತ್ಯ, ನ್ಯಾಯ, ಧರ್ಮ ಮೊದಲಾದ ಮಾನವೀಯ ಮೌಲ್ಯಗಳನ್ನು ಬಿತ್ತರಿಸಿದವು. ಸಾಮಾನ್ಯ ಜನತೆಯ ಮಧ್ಯೆ ಹುಟ್ಟಿ ಅವರಲ್ಲಿಯೇ ಬೆಳೆದು ಬೆಳಗುವ ಈ ಬಯಲಾಟಗಳ ರಂಗಭೂಮಿ ಅವರಿಗೆ ಭಾಷೆಯ ಮಹತಿ, ಹಾಡು, ಕುಣಿತ, ಹಾವಭಾವಗಳ ಬೆಡಗನ್ನು, ದೇವರು–ಧರ್ಮಗಳ ಬಗೆಗೆ ಶ್ರದ್ಧೆ, ನಿಷ್ಠೆ, ಭಯ–ಭಕ್ತಿಗಳನ್ನು ಕಲಿಸುವ ಸಾರ್ವಜನಿಕ ವಿದ್ಯಾಲಯಗಳಾಗಿವೆ. ರಂಗಭೂಮಿ ಶೈವ–ವೈಷ್ಣವ ಎಲ್ಲ ಪಂಥದವರಿಗೂ ಮನರಂಜನೆಯ ಜೊತೆಗೆ ಮತ–ಧರ್ಮಗಳ ನಿಶ್ಚಿತ ರೂಪವನ್ನು ನಿರೂಪಿಸುವುದು. ಅಲ್ಲದೆ ಇದು ಕಲಾವಿದರನ್ನು ಹಾಗೂ ಪ್ರೇಕ್ಷಕರನ್ನು ಒಂದುಗೂಡಿಸುವ ಮಾಧ್ಯಮವಾಗಿದೆ. ರಾಮಾಯಣ–ಮಹಾಭಾರತ ಪುರಾಣಗಳೂ, ಲಿಂಗಾಯತ ಶರಣ–ಶಿವಭಕ್ತರ ಪುರಾಣಗಳೂ, ಸಾಮಾಜಿಕ ವಿಷಯ–ವಸ್ತುಗಳೂ ಈ ರಂಗಭೂಮಿಯ ಮೂಲಕ ಜನಮನದಲ್ಲಿ ಪ್ರಭಾವ ಬೀರಿವೆ. ಒಂದರ್ಥದಲ್ಲಿ ಇದು ಸಾಮಾಜಿಕ ಶಿಕ್ಷಣ ಮಾಧ್ಯಮವಾಗಿದೆ. ಜಾನಪದ ರಂಗಭೂಮಿ ಜನಪದ ಜನಾಂಗದ ಭವ್ಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ.

**ದೊಡ್ಡಾಟ:**

ಇದು ಉತ್ತರ ಕರ್ನಾಟಕದ ಬಯಲಾಟಗಳಲ್ಲೆಲ್ಲಾ ಹೆಚ್ಚು ಪ್ರಾಚೀನವೂ, ಪ್ರೌಢ ಪ್ರಯೋಗವುಳ್ಳದ್ದೂ ಆಗಿದೆ. ಮೂಡಲಪಾಯ ಬಯಲಾಟ ಬಯಲು ಸೀಮೆಯ ಅತ್ಯಂತ ಪ್ರಮುಖ ರಂಗಕಲೆ. ಈ ಸೀಮೆಯಲ್ಲಿ ಅಂದರೆ ಉತ್ತರ ಕರ್ನಾಟಕದಲ್ಲಿ ಇದು ತನ್ನ ಶ್ರೀಮಂತ ಪರಂಪರೆಯನ್ನು ಉಳಿಸಿ–ಬೆಳೆಸಿಕೊಂಡು ಬಂದಿದೆ. ಮೂಡಲ ಅಂದರೆ ಪೂರ್ವ, ಪಾಯ ಅಂದರೆ ಪದ್ಧತಿ, ರೀತಿ, ಶೈಲಿ. ಮೂಡಲಪಾಯವೆಂದರೆ ಪೂರ್ವದ ಪದ್ಧತಿ ಅಥವಾ ಪೂರ್ವ ಪ್ರದೇಶಗಳ ಸಂಪ್ರದಾಯ ಎಂದರ್ಥ. ಪಶ್ಚಿಮ ಕರಾವಳಿಯ ರಮ್ಯ–ಮನೋಹರವಾದ ಯಕ್ಷಗಾನಕ್ಕಿಂತ ವಿಭಿನ್ನವಾದ ಮೂಡಲಪಾಯ ಬಯಲಾಟ, ವೀರ ಪರಂಪರೆ ಹಾಗೂ ಬಯಲು ನಾಡಿಗೆ ಒಪ್ಪುವ ರುದ್ರ–ಮನೋಹರವಾದ ಕಲಾ ಪ್ರಕಾರ. ಈ ಬಯಲಾಟವನ್ನು ಪ್ರಾದೇಶಿಕವಾಗಿ ಮೂಡಲಪಾಯ ದೊಡ್ಡಾಟ, ಹಿರೇಯಾಟ, ಅಟ್ಟದ ಆಟ, ದಶಾವತಾರ ಆಟ ಎಂಬ ಹೆಸರಿನಿಂದ ಕರೆಯುತ್ತಾರೆ. ಕಥಾ ವಸ್ತುವಿನ ಆಯ್ಕೆಯಲ್ಲಿ ವಿಷಯ, ರಸ, ಶೈಲಿಗಳ ನಿರೂಪಣೆಯಲ್ಲಿ, ಭಾಷೆಯ ಬೆಡಗಿನಲ್ಲಿ, ಹಾಡು, ಕುಣಿತ, ಹಾವ–ಭಾವಗಳ ಪ್ರದರ್ಶನದಲ್ಲಿ, ವೇಷಭೂಷಣಗಳ ತಳುಕಿನಲ್ಲಿ, ವಾದ್ಯಗಳ ಮೊಳಗಿನಲ್ಲಿ, ರಂಗ ಸಜ್ಜಿಕೆಯ ವಿಧಾನದಲ್ಲಿ, ಮೂಡಲಪಾಯ ಬಯಲಾಟ ದೊಡ್ಡದಾಗಿ ಗೋಚರಿಸಿದ್ದರಿಂದ ಅದು ದೊಡ್ಡಾಟವಾಯಿತು. ಇದು ಪುರುಷ ಪ್ರಧಾನ ಆಟ; ಇದರಲ್ಲಿ ಗಂಡಸರೇ ಪಾತ್ರಧಾರಿಗಳು. ಹಳ್ಳಿ ಮಧ್ಯದ ಬಯಲಿನಲ್ಲಿ ನಿರ್ಮಿಸಿದ ಅಟ್ಟದ ಮೇಲೆ ಅತ್ಯಂತ ಅಟ್ಟಹಾಸದಿಂದ ವಿಜೃಂಭಿಸುವ ರುದ್ರ–ಭಯಂಕರ ಆಟ ಈ ದೊಡ್ಡಾಟ. ಮೂಡಲ ಹರಿಯುವವರೆಗೂ ಅಥವಾ ಸೂರ್ಯೋದಯವಾಗುವವರೆಗೂ ನಡೆಯುವ ಆಟವಿದು. ಉತ್ತರ ಕರ್ನಾಟಕದಲ್ಲಿ ದೊಡ್ಡಾಟದ ಮೇಳಗಳಿಲ್ಲದ ಹಳ್ಳಿಗಳೇ ಇಲ್ಲ. ಈ ಆಟದಲ್ಲಿ ಜಾನಪದ ರಂಗದ ಕಸುಬು ಹಾಸುಹೊಕ್ಕಾಗಿದೆ.

**ಸಣ್ಣಾಟ:**

ಸಣ್ಣಾಟ ಸುಮಾರು 80 – 90 ವರ್ಷಗಳಲ್ಲಿ ಬೆಳೆದು ಬಂದ ಹಳ್ಳಿಯ ನಾಟಕ ಪದ್ಧತಿ. ಒಂದು ಕಾಲದಲ್ಲಿ ಬೆಳಗಾವಿ, ಧಾರವಾಡ, ವಿಜಯಪುರ ಮೊದಲಾದ ಜಿಲ್ಲೆಗಳಲ್ಲಿ

ಪ್ರದರ್ಶನದ ಜಯಭೇರಿ ಮೊಳಗಿಸಿ, ಮೂಡಲಪಾಯ ದೊಡ್ಡಾಟಗಳ ಸ್ಥಾನವನ್ನು ಆಕ್ರಮಿಸಿದ ಕೀರ್ತಿ ಸಣ್ಣಾಟಗಳದಾಗಿತ್ತು. ಆದರೆ ಸಣ್ಣಾಟ ದೊಡ್ಡಾಟದ ಪ್ರತಿರೂಪವಲ್ಲ; ನಾಟಕವನ್ನು ಜನಪದ ರೀತಿಯಲ್ಲಿ ಆಡುವ ರಂಗಭೂಮಿಯ ಆಟ. ದೊಡ್ಡಾಟ–ಸಣ್ಣಾಟಗಳಲ್ಲಿ ಹರಿಶ್ಚಂದ್ರ, ದಕ್ಷಬ್ರಹ್ಮ, ಬಾಣಾಸುರ, ಕಬೀರದಾಸ, ಲವಕುಶ, ಭೀಮಸೇನ, ಸಂಗ್ಯಾ–ಬಾಳ್ಯಾ, ಚಿತ್ರಸೇನ, ಸೋಮಶೇಖರ ಆಟ, ಮಾನಂದಿ, ಮಾಯಿ, ಭಸ್ಮಾಸುರ, ದೇವಿ ಆಟ ಮೊದಲಾದವುಗಳು ಪ್ರಚಾರದಲ್ಲಿ ಇದ್ದವು. ರಾಜ–ಮಹಾರಾಜರನ್ನು ಕುರಿತು ಬರೆದ ಸಣ್ಣ ಆಟಗಳು ರಾಜನ ಆಟವಾದರೆ, ವೈಷ್ಣವರ ಆಟಗಳು ದಾಸರ ಅಥವಾ ಮಹಾರಾಷ್ಟ್ರದುದ್ದಕ್ಕೂ ಪ್ರವೇಶಿಸಿ, ಅಲ್ಲಿಯ ಕಲಾರಸಿಕರ ಕೈಯಲ್ಲಿ 'ತಮಾಶಾ' ಎಂಬ ಹೊಸರೂಪ ಧರಿಸಿ ಜನಪ್ರಿಯವಾಯಿತು. ಕರ್ನಾಟಕದ ದಾಸರಾಟದ ಸ್ತ್ರೀ ಪಾತ್ರವನ್ನು ಮರಾಠಿಯವರು ರಾಧಾ ಎಂದು ನಾಮಕರಣಗೊಳಿಸಿದರು. ಈ ಆಟದಲ್ಲಿ ರಾಧಾಳದೇ ಪ್ರಮುಖ ಪಾತ್ರವಾಗಿರುವುದರಿಂದ ಮರಾಠಿಯ ತಮಾಶಾದಲ್ಲಿ ಕೆಲವಾರು ಮಾರ್ಪಾಡುಗಳನ್ನು ಮಾಡಿಕೊಂಡು ಇದಕ್ಕೆ 'ರಾಧಾನಾಟ' ಎಂದು ಪುನರ್ ನಾಮಕರಣ ಮಾಡಿದರು. ಸಣ್ಣಾಟಗಳಲ್ಲಿ ಕೇವಲ ಒಂದು ಡಪ್ಪು ಮತ್ತು ತಾಳಗಳನ್ನು ಮಾತ್ರ ಬಳಸುತ್ತಿದ್ದರು. ಮುಂದೆ ಪೇಟಿ, ತಬಲ ಎಲ್ಲದರ ಬಳಕೆ ಪ್ರಾರಂಭವಾಯಿತು. ಊರ ಮಧ್ಯದ ಬಯಲಿನಲ್ಲಿ ಚೌಕಾಕಾರವಾಗಿ ನಾಲ್ಕು ಉದ್ದವಾದ ಗಳಗಳನ್ನು ನೆಟ್ಟು, ಎರಡು ಕಡೆಗೆ ಮೂರು–ಮೂರು ಚಕ್ಕಡಿಯ ಗಾಲಿಗಳನ್ನು ಅರ್ಧ ಹೂಳಿ, ಅವುಗಳ ಹಲ್ಲುಗಳ ನಡುವೆ ಊರಲ್ಲಿ ದೊರೆಯುವ ಪಕ್ಕದ ತೊಲೆಗಳನ್ನು ಸಿಕ್ಕಿಸಿ, ಅವುಗಳ ಮೇಲೆ ಹಲಗೆಗಳನ್ನು ಹಾಕಿದರೆ ತೀರಿತು. ಮುಂದೆ ಸೂತ್ರಧಾರ, ಮಧ್ಯದಲ್ಲಿ ವಾದ್ಯ ಮೇಳದವರು, ಹಿಂದೆ ಹಿನ್ನೆಲೆಯವರು; ಈ ಆಟಗಳಲ್ಲಿ ಸಾರಥಿ ಅಥವಾ ಧೂತಿ ಆಡುವ ಮಾತುಗಳು ಪ್ರಾಸಬದ್ಧವಾಗಿ ಪದ್ಯಮಯ ಗದ್ಯದಲ್ಲಿ ಸೂಚಿಸುತ್ತಿರುತ್ತದೆ.

**ಶ್ರೀ ಕೃಷ್ಣ ಪಾರಿಜಾತ:**

ಉತ್ತರ ಕರ್ನಾಟಕದ ಪ್ರಖ್ಯಾತ ಬಯಲಾಟಗಳಲ್ಲಿ ಪಾರಿಜಾತಕ್ಕೆ ಅಗ್ರಸ್ಥಾನವಿದೆ. ಮಹಲಿಂಗಪುರ ನಿಂಗವ್ವ, ಹುನ್ನೂರ ಜಮಖಂಡಿಯ ಶ್ರೀ ಅಪ್ಪಾಲಾಲ ನದಾಫ್ ಇವರ ಪಾರಿಜಾತಗಳನ್ನು ಜನ ಇಂದಿಗೂ ಮರೆತಿಲ್ಲ. ಪಾರಿಜಾತವು ಉತ್ತರ ಕರ್ನಾಟಕದ ಜಾನಪದ ರಂಗಭೂಮಿಯ ಒಂದು ಮಹತ್ವದ ಬಯಲಾಟ. ಸಣ್ಣಾಟವೆಂದರೆ ಪಾರಿಜಾತವೇ ಎನ್ನುವಷ್ಟರ ಮಟ್ಟಿಗೆ ಹೆಗ್ಗಳಿಕೆ ಸಂಪಾದಿಸಿಕೊಂಡಿದೆ. ಉತ್ತರ ಕರ್ನಾಟಕದ ಜನಮನ ರಂಜಿಸಿದ ಕಲೆ ಇದು. ತನ್ನ ಜನಪ್ರಿಯತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಕೃಷ್ಣ ಪಾರಿಜಾತ ಕನ್ನಡ ಜಾನಪದ ರಂಗಭೂಮಿಗೆ ಉತ್ತರ ಕರ್ನಾಟಕದ ಅಪೂರ್ವ ಕೊಡುಗೆಯಾಗಿದೆ. ಕ್ರಿ.ಶ.1800 ಸುಮಾರಿಗೆ ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನೆಂಬ ಜಾನಪದ ಕವಿಯು ಗೀತರೂಪದಲ್ಲಿ ಅಥವಾ ಯಕ್ಷಗಾನ ರೂಪದಲ್ಲಿ ಪಾರಿಜಾತ ರಚಿಸಿದ. ಇದು ರಂಗರಚನೆಯಲ್ಲ; ಹಾಡುಗಬ್ಬ. ಹಾಡುಗಬ್ಬವಾಗಿ ಸಾಕಷ್ಟು ಜನಪ್ರಿಯವಾದ ಈ ಗ್ರಂಥವನ್ನು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕುಲಗೋಡು ಗ್ರಾಮದ ತಮ್ಮಣ್ಣ ಪಾರಿಜಾತ ಮ್ಯಾಕಟ್ಟಿ, ತಾನೇ ಅದರ ಮುಖ್ಯಸ್ಥರಾಗಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಅಟ್ಟಕಟ್ಟಿ ಆಡಿ ಜನ ಮೆಚ್ಚುಗೆಯನ್ನು ಗಳಿಸಿದರು. ಇತರ ಬಯಲಾಟಗಳಿಲ್ಲಿರುವುದಕ್ಕಿಂತಲೂ ಹೆಚ್ಚಿನ ಕ್ರಮಬದ್ಧವಾದ ಸಂಭಾಷಣೆ, ರಂಗಭೂಮಿಯ ಲಾಲಿತ್ಯವುಳ್ಳ ಹಾಡುಗಳ ಸಂಗೀತ, ಸ್ತ್ರೀ–ಪುರುಷರ ಪಾತ್ರದಲ್ಲಿ ಇತ್ಯಾದಿಗಳು ಪಾರಿಜಾತದ ಪ್ರಯೋಗದಲ್ಲಿ ಕಂಡುಬರುವುದರಿಂದ ಇದು ಹೆಚ್ಚು ಜನಾದರಣೀಯವಾಗಿತ್ತು. ಆದರೆ ಪ್ರೇಕ್ಷಕರ ಮತ್ತು ರಂಗಭೂಮಿಯ ಕಲಾವಿದರ

ಅಭಿರುಚಿಯ ಬದಲಾವಣೆಯಿಂದಾಗಿ ಜಾನಪದ ಸಂಗೀತ–ಹಾಡುಗಳು ದೂರ ಸರಿಯತೊಡಗಿದವು, ಕಲಾವಿದರು ಮರಾಠಿಯ ಲಘು ಸಂಗೀತಕ್ಕೆ ಆಕರ್ಷಿತರಾದರು.

**ತೊಗಲು ಗೊಂಬೆಯಾಟ:**

ಯಕ್ಷಗಾನ ಸಂಪ್ರದಾಯದಲ್ಲಿಯೇ ಬೆಳೆದು ಬಂದ ಬಯಲಾಟಗಳಿಗಿಂತ ಪ್ರಾಚೀನವಾದ ಕಲೆ ಸೂತ್ರದ ಗೊಂಬೆಯಾಟ. ಇದಕ್ಕೆ ಏನಿಲ್ಲ ಅಂದರೂ ಎರಡು ಸಾವಿರ ವರ್ಷದ ಇತಿಹಾಸವಿದೆ. ಮರದ ಗೊಂಬೆಗಳಿಗೆ ಸೊಗಸಾಗಿ ಬಣ್ಣ ಬಳಿದು, ಯಕ್ಷಗಾನ ವೇಷಭೂಷಣಗಳನ್ನು ಧರಿಸಿ ಸೂತ್ರಗಳ ನೆರವಿನಿಂದ ಅವುಗಳನ್ನು ಒಂದು ಕಪ್ಪು ಪರದೆಯ ಹೊರಗೆ ಕುಣಿಸಲಾಗುವುದು. ಕಲಾವಿದರು ರಂಗದೊಳಗೆ ಸೇರಿಕೊಳ್ಳುತ್ತಾರೆ, ಗೊಂಬೆಗಳು ಮಾತ್ರ ಹೊರಗೆ ಕಾಣಿಸಿಕೊಳ್ಳುತ್ತವೆ. ಮಾನವರೇ ಮಾತನಾಡಿದರೂ ಗೊಂಬೆಗಳೇ ಮಾತನಾಡಿದಂತೆ, ಹಾಡಿದಂತೆ ಇರುತ್ತದೆ. ಕೈಕಾಲುಗಳನ್ನು ಆಡಿಸುವುದರ ಜೊತೆಗೆ ಕೆಲವು ಗೊಂಬೆಗಳು ತುಟಿಯನ್ನು ಅಲುಗಿಸಬಲ್ಲವು, ಕಣ್ಣನ್ನು ಹೊರಳಿಸಬಲ್ಲವು. ಒಟ್ಟಿನಲ್ಲಿ ಇದೊಂದು ಮಾಯಾಸೃಷ್ಟಿ. ಸೂತ್ರದ ಗೊಂಬೆ ಆಟದ ಅನೇಕ ತಂಡಗಳು ಈಗ ಕಣ್ಮರೆಯಾಗಿದ್ದರೂ ಕೆಲವು ತಂಡಗಳು ಈಗಲೂ ಪ್ರದರ್ಶನವನ್ನು ನೀಡುತ್ತಾ ಬಂದಿವೆ. ಮಂಗಳೂರು, ಶಿವಮೊಗ್ಗ, ಧಾರವಾಡ, ಮಂಡ್ಯ, ಮೈಸೂರು, ಬಳ್ಳಾರಿ, ತುಮಕೂರು ಜಿಲ್ಲೆಗಳಲ್ಲಿ ಈ ಕಲೆ ಇನ್ನೂ ಬದುಕಿದೆ. ತೊಗಲುಗೊಂಬೆಯಾಟವೂ ಯಕ್ಷಗಾನ ಸಂಪ್ರದಾಯದ ಕಲೆಯೇ. ಕಿಳ್ಳೇಕ್ಯಾತರು ಅಥವಾ ಗೊಂಬೆರಾಮರು ಹಿಂದಿನಿಂದಲೂ ಈ ಕಲೆಯನ್ನು ಅವಲಂಬಿಸಿ ಜೀವನ ಮಾಡುತ್ತಾ ಬಂದಿದ್ದಾರೆ. ಇಡೀ ಕುಟುಂಬವೇ ಪ್ರದರ್ಶನದಲ್ಲಿ ಭಾಗವಹಿಸುತ್ತದೆ. ವರ್ಣರಂಜಿತವಾದ ಚರ್ಮದ ಗೊಂಬೆಗಳನ್ನು ಇಲ್ಲಿ ಪರದೆಯ ಹಿಂದೆ ಕುಣಿಸಲಾಗುತ್ತದೆ. ಸುತ್ತಲೂ ಮುಚ್ಚಿದ ಚಿಕ್ಕ ರಂಗ ಮಂದಿರದ ಒಳಗೆ ಎಲ್ಲ ಕಲಾವಿದರು ಸೇರಿಕೊಳ್ಳುತ್ತಾರೆ. ಇಬ್ಬರು ಗೊಂಬೆಗಳನ್ನು ಕುಣಿಸಿದರೆ, ಉಳಿದವರು ಗೊಂಬೆಗಳನ್ನು ಒದಗಿಸುತ್ತ, ವಾದ್ಯಗಳನ್ನು ನುಡಿಸುತ್ತಾ, ಹಿನ್ನೆಲೆ ಹಾಡುತ್ತಾ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ. ಈ ಸಂಪ್ರದಾಯದ ಕಲೆ ಕರ್ನಾಟಕದಲ್ಲಿ ಜೀವಂತವಾಗಿ ಉಳಿದಿದೆ.

**ಯಕ್ಷಗಾನ ಬಯಲಾಟ:**

ಯಕ್ಷಗಾನ ಬಯಲಾಟ ಜಾನಪದ ಮೂಲದಿಂದ, ಪುರಾಣ ಮೂಲದಿಂದ ಸ್ವೀಕರಿಸಿ ಸಂಗೀತ, ನೃತ್ಯ, ವೇಷಭೂಷಣ, ವರ್ಣಗಾರಿಕೆಗಳಿಂದ ಸಮರಸಗೊಂಡ ಅಪೂರ್ವದ ಕಲೆಯಾಗಿದೆ. ಭಾಗವತ ಕಥೆ–ಅದನ್ನು ಹಾಡುತ್ತ ಸಾಗಿದಂತೆ, ವೇಷಧಾರಿಗಳು ಅದಕ್ಕೆ ಅನುಗುಣವಾಗಿ ನರ್ತಿಸಿ, ಅಭಿನಯಿಸಿ ಅದನ್ನು ಅರ್ಥೈಸುತ್ತಾರೆ. ಮೂಲತಃ ಕೇವಲ ಹಾಡುಗಬ್ಬವಾಗಿ ಉಳಿದಿದ್ದ ಯಕ್ಷಗಾನ, ಇತರ ಅಂಗಗಳನ್ನು ಸ್ವೀಕರಿಸಿ ನಾಟಕವಾಗಿ ನಿಂತ ಯಕ್ಷಗಾನ ಶಬ್ದಕ್ಕೆ ಏನೆಲ್ಲಾ ಎಂದರೂ ಸಾವಿರ ವರ್ಷದ ಇತಿಹಾಸ ಕಂಡು ಬರುತ್ತದೆ. ನಮ್ಮಲ್ಲಿ ಯಕ್ಷಗಾನ ಕೃತಿಗಳು 500 ವರ್ಷಗಳ ಹಿಂದಿನಿಂದ ಲಭ್ಯವಾಗುತ್ತವೆ. ಹಗರಣ, ನಾಡಾಡಿಗಳು ಮುಂತಾದ ಶಬ್ದಗಳು ನಮ್ಮ ಹಳೆಯ ಕಾವ್ಯದಲ್ಲಿ ಲಭ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ ಈ ಯಕ್ಷಗಾನ ಬಯಲಾಟ ಕರ್ನಾಟಕದ ನಾಟಕ ಕಲೆಯ ಪ್ರಾಚೀನತೆಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ಯಕ್ಷಗಾನವು ಕರಾವಳಿ ಪ್ರದೇಶದ ರುದ್ರ–ಮನೋಹರವಾದ ಜನಪ್ರಿಯ ಗ್ರಾಮೀಣ ರಂಗಕಲೆ. ಇದು ಭಾರತೀಯ ರಂಗಭೂಮಿಗೆ ಕನ್ನಡ ನಾಡಿನ ಹೆಮ್ಮೆಯ ಕೊಡುಗೆಯೂ ಆಗಿದೆ. ಗೀತ–ನೃತ್ಯಗಳೇ ಈ ಆಟದ ವೈಶಿಷ್ಟ್ಯ , ಗದ್ಯದ ಮಾತುಗಳು ಇಲ್ಲವೆನ್ನುವಷ್ಟು ಕಡಿಮೆ.

ಕರಾವಳಿಯ ಯಕ್ಷಗಾನ ಪ್ರತಿಗಳಲ್ಲಿ ಸಂಭಾಷಣೆ ಇರುವುದಿಲ್ಲ. ಮೂಡಲಪಾಯ ಯಕ್ಷಗಾನದ ಇತ್ತೀಚಿನ ಪ್ರತಿಗಳಲ್ಲಿ ಸಂಭಾಷಣೆ ಕಂಡುಬರುತ್ತದೆ. ಪಡುವಲಪಾಯದ ಕಲಾವಿದರು ತಾವೇ ಸ್ವಯಂ ಸ್ಫೂರ್ತಿಯಿಂದ ಸಂಭಾಷಣೆಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಯಕ್ಷಗಾನ ಬಯಲಾಟಗಳಲ್ಲಿ ಸಂಗೀತ ತನ್ನದೇ ಆದ ವೈವಿಧ್ಯದಿಂದ ಕೂಡಿರುತ್ತದೆ. ಕರ್ನಾಟಕ ಸಂಗೀತಕ್ಕೆ ಸರಿಸುಮಾರಾಗಿ ಬೆಳೆದುಕೊಂಡ ಸ್ವತಂತ್ರ ಸಂಗೀತ ಮಾರ್ಗವಿದು. ಈ ನಾಟಕಗಳ ವೇಷಭೂಷಣದ ವೈಭವ ಅನುಪಮವಾದದ್ದು. ಕಿರೀಟ, ಭುಜಕೀರ್ತಿ, ಎದೆ ಹಾರ, ವೀರಗಾಸೆ, ಕೈಕಟ್ಟು, ಕಾಲ್ಕಡಗ, ನಡು ಪಟ್ಟಿಗೆಗಳ ಜೊತೆಗೆ ಕಾಸೆಯನ್ನು ಹಾಕಿ ಬಣ್ಣ ಬಣ್ಣದ ನಿಲುವಂಗಿ ಅಥವಾ ಕುಂಡಗಳನ್ನು, ಭರ್ಜರಿ ವಸ್ತ್ರಗಳನ್ನು ಹಾಕಿ ಪಾತ್ರಧಾರಿ ಶೋಭಾಯಮಾನವಾಗಿ ಕಾಣುವಂತೆ ಮಾಡಲಾಗಿರುತ್ತದೆ. ಮುಖಕ್ಕೆ ಹಾಕುವ ಬಣ್ಣದಲ್ಲೂ ನಾನಾ ವೈವಿಧ್ಯಗಳಿವೆ. ರಾಕ್ಷಸ ಪಾತ್ರಗಳ ವೇಷದ ವರ್ಣಗಾರಿಕೆ ಅದ್ಭುತವಾಗಿರುತ್ತವೆ. ಹೀಗೆ ಕಣ್ಣು ಸೆಳೆಯುವ ವೇಷವನ್ನು ಧರಿಸಿ ರಂಗವೇರಿದ ಪಾತ್ರಧಾರಿಗಳು ವಿಶಿಷ್ಟ ಶೈಲಿಯಲ್ಲಿ ನರ್ತಿಸುತ್ತಾರೆ. ಬಯಲಾಟದ ನೃತ್ಯ ಸಂಪ್ರದಾಯವೊಂದು ಎಲ್ಲ ಪ್ರದೇಶಗಳಲ್ಲಿಯೂ ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ ಉಳಿದು ಬಂದಿದೆ. ಯಕ್ಷಗಾನ ಬಯಲಾಟಗಳಲ್ಲಿ ಭಾಗವತನದು ಸಂಗೀತವಾದರೆ, ಕುಣಿತ ಹಾಗೂ ಸಂಭಾಷಣೆ ಪಾತ್ರಧಾರಿಗಳದು.

ಮೌಖಿಕ ಪರಂಪರೆಯ ಹಳ್ಳಿಗಾಡಿನ ನಿರಕ್ಷರಿಗಳು ತಮ್ಮ ಜೀವನದ ಗಾಢ ಅನುಭವದೊಂದಿಗೆ ಪುರಾಣ ಪುಣ್ಯ ಕಥೆಗಳ ಪರಿಚಯದೊಂದಿಗೆ ಜನಪ್ರಿಯ ಶೈಲಿಯಲ್ಲಿ ಬಯಲಾಟಗಳನ್ನು ರಚಿಸಿ ಆಡಿ, ಹಾಡಿ–ಕುಣಿದು ತೃಪ್ತಿ ಪಟ್ಟು ಜನಸಮುದಾಯವನ್ನು ತೃಪ್ತಿಪಡಿಸಿದವರು. ಇಂಥವರ ಸಮಗ್ರ ಪ್ರಯತ್ನದ ಫಲವೇ ರಂಗಭೂಮಿಯ ಬಯಲಾಟಗಳು. ಧರ್ಮಪೀಠಗಳು, ಕನ್ನಡ ಶಾಲೆಯ ಶಿಕ್ಷಕರು, ಪತ್ತಾರ, ಕಂಬಾರ, ಕುಂಬಾರ ಮೊದಲಾದ ಸಾಂಸ್ಕೃತಿಕ ಮನೋಧರ್ಮದ ಕಲಾವಿದರು ಆಡಿಸಿದವರು, ಪೋಷಿಸಿದವರು. ರಾಜ–ಮಹಾರಾಜರು, ದೇಸಾಯಿ, ದೇಶಪಾಂಡೆಯವರು, ಧರ್ಮಪೀಠ–ಮಠಗಳು ಈ ಕಲೆಯನ್ನು ಬೆಳೆಸಿದ ಪುಣ್ಯಭಾಗಿಗಳು. ಹೀಗೆ ಜನಪದ ಸಮಾಜದಲ್ಲಿ ಹುಟ್ಟಿ ಬೆಳೆದ ಬಯಲಾಟಗಳು ಬದುಕಬೇಕಾದರೆ ಆ ಸಮಾಜವೇ ಅವಕ್ಕೆ ಆಶ್ರಯ.

ಕರ್ನಾಟಕ ಜಾನಪದದಲ್ಲಿ ಹಲವಾರು ಪ್ರದರ್ಶನ ಕಲೆಗಳಿದ್ದು ಅವು ಸಮೃದ್ಧಿಯಿಂದ, ವೈವಿಧ್ಯತೆಯಿಂದ ಕೂಡಿ ತನ್ನೆಲ್ಲಾ ಆಕರ್ಷಣೆಗಳಿಂದ ಜನತೆಯಲ್ಲಿ ಸಹಸ್ರಾರು ವರ್ಷಗಳಿಂದ ಕಲಾಸಮೃದ್ಧಿಯನ್ನು ಉಳಿಸಿಕೊಂಡು ಬಂದಿದೆ. ಇವು ಮನೋರಂಜನೆಯ ಜೊತೆಗೆ ಸಮಾಜಕ್ಕೆ ನೀತಿ ಬೋಧಕವೂ ಆಗಿವೆ. ಜಾನಪದ ಕಾವ್ಯ ಶ್ರಮಪಟ್ಟು ಕಟ್ಟಿದ ಸಾಹಿತ್ಯವಲ್ಲ, ಉದ್ದೇಶಿತ ಸಾಹಿತ್ಯವೂ ಅಲ್ಲ, ಸಿದ್ದ ಸಾಹಿತ್ಯವೂ ಅಲ್ಲ; ಎಲ್ಲವೂ ಎಲ್ಲರಿಗೂ ಬೇಕು. ಜಾನಪದ ಕಾವ್ಯದ ಜೀವ–ನ್ಯಾಯ ಅಳೆಯುವ ಮಾನದಂಡಗಳು ಜಾನಪದ ಕಾವ್ಯಕ್ಕೆ ಇಲ್ಲ. ಆದರೆ ಶಿಷ್ಟ ಕಾವ್ಯದಲ್ಲಿ ಸಿಗಲಾರದ ಅಪೂರ್ವ ಸೊಗಸು ಜಾನಪದದಲ್ಲಿ ಸಿಗುತ್ತದೆ. ಒಟ್ಟಾರೆ ಜಾನಪದ ಕಾವ್ಯ ಎಂಬುವುದು ಸ್ವಚ್ಛಂದ ಬದುಕಿನ ದಾರಿದೀಪ, ಬದುಕಿನ ಪ್ರತಿಯೊಂದು ಹಂತವನ್ನು ಹೊಸದಾಗಿ ಮಾಡಿ ತೀರುವ ನವರೂಪ.

**ಜನಪದ ರಂಗಭೂಮಿಯ ಸಾಮಾಜಿಕ ಪ್ರಭಾವ:**

- ಸಾಮಾಜಿಕ ಜಾಗೃತಿ: ಜನಪದ ರಂಗಭೂಮಿ ಸಮಾಜದಲ್ಲಿರುವ ಅನಕ್ಷರತೆ, ಮೂಢನಂಬಿಕೆ, ಬಾಲ್ಯವಿವಾಹ, ವರದಕ್ಷಿಣೆ, ಜಾತಿಭೇದ, ಶೋಷಣೆ ಮುಂತಾದ ಸಮಸ್ಯೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತದೆ.

- ಸಾಮಾಜಿಕ ಸುಧಾರಣೆ: ಸಮಾಜದಲ್ಲಿರುವ ಅನ್ಯಾಯ ಮತ್ತು ಅಸಮಾನತೆಗಳನ್ನು ನಾಟಕದ ಮೂಲಕ ತೋರಿಸುವುದರಿಂದ ಜನರು ತಮ್ಮ ಸಾಮಾಜಿಕ ಆಚರಣೆಗಳನ್ನು ಪರಿಶೀಲಿಸಲು ಪ್ರೇರೇಪಿತರಾಗುತ್ತಾರೆ. ಹೀಗಾಗಿ ಜನಪದ ರಂಗಭೂಮಿ ಸಾಮಾಜಿಕ ಬದಲಾವಣೆಯ ಸಾಧನವಾಗುತ್ತದೆ.
- ಸಂಸ್ಕೃತಿಯ ಸಂರಕ್ಷಣೆ: ಸ್ಥಳೀಯ ಆಚರಣೆಗಳು, ಜನಪದ ಹಾಡುಗಳು, ವೇಷಭೂಷಣ, ಭಾಷೆ, ಸಂಗೀತ, ನೃತ್ಯ ಮತ್ತು ಕಥೆಗಳನ್ನು ಉಳಿಸುವಲ್ಲಿ ಜನಪದ ರಂಗಭೂಮಿ ಮಹತ್ವದ ಪಾತ್ರ ವಹಿಸುತ್ತದೆ.
- ರಾಷ್ಟ್ರೀಯ ಮತ್ತು ಸಾಮಾಜಿಕ ಏಕತೆ: ವಿವಿಧ ಸಮುದಾಯಗಳ ಜನರು ಒಂದಾಗಿ ಕಾರ್ಯಕ್ರಮಗಳನ್ನು ವೀಕ್ಷಿಸುವ ಮತ್ತು ಭಾಗವಹಿಸುವ ಅವಕಾಶ ದೊರೆಯುವುದರಿಂದ ಪರಸ್ಪರ ಸಹಕಾರ, ಸಹೋದರತ್ವ ಮತ್ತು ಏಕತೆಯ ಭಾವನೆ ಬೆಳೆಯುತ್ತದೆ.
- ಶಿಕ್ಷಣದ ಮಾಧ್ಯಮ: ಔಪಚಾರಿಕ ಶಿಕ್ಷಣದಿಂದ ದೂರವಿರುವ ಜನರಿಗೂ ಸಾಮಾಜಿಕ, ನೈತಿಕ ಮತ್ತು ಜೀವನ ಮೌಲ್ಯಗಳನ್ನು ಸುಲಭವಾಗಿ ತಲುಪಿಸುವ ಪರಿಣಾಮಕಾರಿ ಮಾಧ್ಯಮವಾಗಿದೆ.
- ಮಹಿಳಾ ಜಾಗೃತಿ: ಮಹಿಳೆಯರ ಶಿಕ್ಷಣ, ಸ್ವಾವಲಂಬನೆ, ಸಮಾನತೆ, ಹಕ್ಕುಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದಂತಹ ವಿಷಯಗಳನ್ನು ನಾಟಕಗಳ ಮೂಲಕ ಪ್ರಸ್ತುತಪಡಿಸಿ ಮಹಿಳಾ ಸಬಲೀಕರಣಕ್ಕೆ ಸಹಕಾರ ನೀಡುತ್ತದೆ.
- ಪ್ರಜಾಸತ್ತಾತ್ಮಕ ಮೌಲ್ಯಗಳ ಬೆಳವಣಿಗೆ: ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಹಕ್ಕು ಮತ್ತು ಕರ್ತವ್ಯಗಳಂತಹ ಮೌಲ್ಯಗಳನ್ನು ಜನರಿಗೆ ತಿಳಿಸುವ ಮೂಲಕ ಜವಾಬ್ದಾರಿಯುತ ನಾಗರಿಕತೆಯ ಅರಿವು ಮೂಡಿಸುತ್ತದೆ.
- ಸ್ಥಳೀಯ ಕಲಾವಿದರಿಗೆ ಅವಕಾಶ: ಗ್ರಾಮೀಣ ಪ್ರದೇಶದ ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಜನಪದ ರಂಗಭೂಮಿ ವೇದಿಕೆಯನ್ನು ಒದಗಿಸುತ್ತದೆ. ಇದರಿಂದ ಅವರ ಕಲಾ ಪರಂಪರೆಯೂ ಉಳಿಯುತ್ತದೆ.

**ಆಧುನಿಕ ಕಾಲದಲ್ಲಿ ಜನಪದ ರಂಗಭೂಮಿಯ ಮಹತ್ವ:**

ದೂರದರ್ಶನ, ಸಿನಿಮಾ, ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ಮನರಂಜನೆಯ ಬೆಳವಣಿಗೆಯಿಂದ ಜನಪದ ರಂಗಭೂಮಿಗೆ ಕೆಲವು ಸವಾಲುಗಳು ಎದುರಾಗಿವೆ. ಆದರೂ ಜನರೊಂದಿಗೆ ನೇರ ಸಂವಹನ ನಡೆಸುವ ಸಾಮರ್ಥ್ಯ ಇದರ ಪ್ರಮುಖ ಶಕ್ತಿಯಾಗಿದೆ. ಆಧುನಿಕ ಸಾಮಾಜಿಕ ಸಮಸ್ಯೆಗಳಾದ ಪರಿಸರ ಸಂರಕ್ಷಣೆ, ಮಾದಕ ವ್ಯಸನ, ಸೈಬರ್ ಅಪರಾಧ, ಮತದಾನದ ಮಹತ್ವ, ಆರೋಗ್ಯ ಮತ್ತು ಸ್ವಚ್ಛತೆಯಂತಹ ವಿಷಯಗಳ ಕುರಿತು ಜನಪದ ರಂಗಭೂಮಿಯ ಮೂಲಕ ಪರಿಣಾಮಕಾರಿ ಜಾಗೃತಿ ಮೂಡಿಸಬಹುದು.

ಜನಪದ ರಂಗಭೂಮಿ ಕೇವಲ ಮನರಂಜನೆಯ ಸಾಧನವಲ್ಲ; ಅದು ಸಮಾಜದ ಕನ್ನಡಿ, ಶಿಕ್ಷಣದ ಮಾಧ್ಯಮ ಮತ್ತು ಸಾಮಾಜಿಕ ಪರಿವರ್ತನೆಯ ಶಕ್ತಿಶಾಲಿ ಸಾಧನವಾಗಿದೆ. ಇದು ನಮ್ಮ ಜನಪದ ಸಂಸ್ಕೃತಿಯನ್ನು ಸಂರಕ್ಷಿಸುವುದರ ಜೊತೆಗೆ ಸಾಮಾಜಿಕ ಸಮಸ್ಯೆಗಳ ಕುರಿತು ಜನರಲ್ಲಿ ಅರಿವು ಮೂಡಿಸುತ್ತದೆ. ಆದ್ದರಿಂದ ಜನಪದ ರಂಗಭೂಮಿಯನ್ನು ಉಳಿಸಿ ಬೆಳೆಸುವುದು ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಜವಾಬ್ದಾರಿಯಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಪರಮಶಿವಯ್ಯ ಜೀ. ಶಂ., (1989), ಜಾನಪದ, ಮೈಸೂರು: ಚೇತನ ಬುಕ್ ಹೌಸ್.
2. ರಾಮಚಂದ್ರೇಗೌಡ ಹಿ. ಶಿ., (1998), ಜಾನಪದ ಸಾಂಸ್ಕೃತಿಕ ಆಯಾಮಗಳು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಸುಂಕಾಪುರ ಎಂ. ಎಸ್., (1980), ಜಾನಪದ ಸಾಹಿತ್ಯ ದರ್ಶನ, ಧಾರವಾಡ: ಜಾನಪದ ಭಂಡಾರ.